# ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ,

"ಮಲೆನಾಡ ಸಿರಿ" ಸಾಗರ ರಸ್ತೆ, ಶಿವಮೊಗ್ಗ –577 201.

ದೂರವಾಣಿ ಸಂ:08182 257862 ಫ್ಯಾಕ್ಸ್ ಸಂ:08182 257631 ಇಮೇಲ್:madbsecretary@gmail.com


---

2017–18ನೇ ಸಾಲಿನ ದ್ವಿತೀಯ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ: 29–11–2017ರಂದು ಬುಧವಾರ ಬೆಳಗ್ಗೆ 11–30 ಗಂಟೆಗೆ ಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ.ಹೆಚ್.ಎಸ್.ಮೋಹನ್ ರವರ ಅಧ್ಯಕ್ಷತೆಯಲ್ಲಿ " ಮಲೆನಾಡ ಸಿರಿ " ಕಚೇರಿಯ ಸಭಾಂಗಣ,ಶಿವಮೊಗ್ಗ ಇಲ್ಲಿ ಜರುಗಿದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಾಮಾನ್ಯ ಸಭೆಯ ಸಭಾ ನಡವಳಿಗಳು.

ಸಭೆಗೆ ಹಾಜರಾದ ಸದಸ್ಯರುಗಳ ಹಾಜರಾತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಮಂಡಳಿ ಕಾರ್ಯದರ್ಶಿ(ಪ್ರಭಾರ) ಇವರು ಸಭೆಗೆ ಆಗಮಿಸಿದ ಮಂಡಳಿಯ ಮಾನ್ಯ ಅಧ್ಯಕ್ಷರನ್ನು, ಮಾನ್ಯ ಶಾಸಕರುಗಳನ್ನು ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳನ್ನು ನಾಮ ನಿರ್ದೇಶಿತ ಸದಸ್ಯರುಗಳನ್ನು ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಹಾಗೂ ಅಧಿಕಾರಿ ವರ್ಗದವರನ್ನು ಹಾರ್ದಿಕವಾಗಿ ಸ್ವಾಗತಿಸಿ ಸಭಾ ವಿಷಯ ಸೂಚಿಯಂತೆ ಕಲಾಪ ನಡೆಸಿಕೊಡಲು ಮಾನ್ಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಾನ್ಯ ಗೌರವಾನ್ವಿತ ವಿಧಾನ ಸಭಾ ಸದಸ್ಯರೇ, ಮಾನ್ಯ ವಿಧಾನ ಪರಿಷತ್ ಸದಸ್ಯರೇ, ಜಿಲ್ಲಾ ಪಂಚಾಯತ್ ಅಧ್ಯಕ್ಷರೇ,ನಾಮ ನಿರ್ದೇಶಿತ ಸದಸ್ಯರೇ, ಮಾನ್ಯ ಕಾರ್ಯದರ್ಶಿಗಳೇ, ಮಂಡಳಿಯ ಅಧಿಕಾರಿಗಳೇ ಹಾಗೂ ಮಂಡಳಿಯ ಎಲ್ಲಾ ಸಿಬ್ಬಂದಿ ವರ್ಗದವರೇ,

ನಿಮ್ಮನ್ನೆಲ್ಲಾ ಅತ್ಯಂತ ಸಂತೋಷ ಹಾಗೂ ಗೌರವದಿಂದ ಈ ದಿವಸದ 2017–18ನೇ ಸಾಲಿನ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಮಹಾ ಸಭೆಗೆ ಅಧ್ಯಕ್ಷನಾಗಿ ಮತ್ತೊಮ್ಮೆ ತಮ್ಮನ್ನೆಲ್ಲಾ ಆಹ್ವಾನಿಸುತ್ತಿದ್ದೇನೆ.

ದಿನಾಂಕ:4–11–2016 ರಂದು ಕರ್ನಾಟಕ ಸರ್ಕಾರವು ನನ್ನನ್ನು ಮಂಡಳಿಯ ಅಧ್ಯಕ್ಷನಾಗಿ ನೇಮಕ ಮಾಡಿದ್ದು, ಇಂದು ಎರಡನೇ ಬಾರಿಗೆ ಇಂದು ತಮ್ಮನ್ನೆಲ್ಲಾ ಭೇಟಿ ಮಾಡುವ ಅವಕಾಶ ಸಿಕ್ಕಿದೆ. ನಾನು ಅಧಿಕಾರ ವಹಿಸಿಕೊಂಡು ಒಂದು ವರ್ಷ ಕಳೆದಿದ್ದು, ಈ ಅವಧಿಯಲ್ಲಿ ಪ್ರಮುಖವಾದ ಮಂಡಳಿಯ ಕಾರ್ಯ ಕಲಾಪಗಳ ವೈಖರಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರುತ್ತೇನೆ. ಈ ಅವಧಿಯಲ್ಲಿ ನಾನು ಮತ್ತು ಕಾರ್ಯದರ್ಶಿಗಳು, ಹಲವು ಮಂಡಳಿಯ ಕಾಮಗಾರಿಗಳ ಪ್ರಗತಿಯ ವೀಕ್ಷಣೆ ಮಾಡಲಾಗಿದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಕಾಮಗಾರಿ ಪ್ರಗತಿಯ ಪರಿಶೀಲನೆಗಾಗಿ ಅಧಿಕಾರಿಗಳ ಸಭೆಯನ್ನು ನಡೆಸಿ ಸೂಕ್ತ ಸಮಯದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿರ್ದೇಶನ ನೀಡಿರುತ್ತೇನೆ. ಮಂಡಳಿ ಕಚೇರಿಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳ ಕಾರ್ಯ ಪರಿಶೀಲನೆ ಸಭೆಯನ್ನು ನಡೆಸಿರುವ ಬಗ್ಗೆ ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಕಂಡು ಬಂದ ಒಂದು ಅಂಶವೆಂದರೆ ಮಂಜೂರಾತಿ ನೀಡಿರುವ ಹಲವು ಹಳೆಯ ಕಾಮಗಾರಿಗಳು ಇನ್ನೂ ಪೂರ್ಣಗೊಳ್ಳದೆ ಇದ್ದು ಹಲವು ಕಾರಣಗಳಿಂದ 2012–13, 2013–14, 2014–15 ರ ಸಾಲಿನ ಕಾಮಗಾರಿಗಳು ಪಟ್ಟಿಯಲ್ಲಿ ಮುಂದುವರೆಯುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಈ ಹಿಂದೆ ಕಾಮಗಾರಿಗಳ ಬದಲಾವಣೆಯ ಅಧಿಕಾರ ಮಂಡಳಿಗೆ ಇದ್ದು, ನಾನು ಅಧ್ಯಕ್ಷನಾದ ಸಂದರ್ಭದಲ್ಲಿ ಅದನ್ನು ಸರ್ಕಾರವು ಹಿಂದೆ ತೆಗೆದುಕೊಂಡಿದ್ದು, ಕಾಮಗಾರಿಗಳ ಬದಲಾವಣೆಗೆ ತೆಗೆದುಕೊಳ್ಳುವ ಸಮಯ ವಿಳಂಬವಾಗುತ್ತಿತ್ತು. ಹಿಂದಿನ ಸಾಮಾನ್ಯ ಸಭೆ ನಿರ್ಣಯದಂತೆ ಕಾಮಗಾರಿ ಬದಲಾವಣೆ ಬಗ್ಗೆ ಮಾನ್ಯ

ಯೋಜನಾ ಸಚಿವರಿಗೆ ಮನವಿ ನೀಡಿ ಕೋರಿದ ಮೇರೆಗೆ ಒಮ್ಮೆ ಕಾಮಗಾರಿ ಬದಲಾವಣೆ ಅಧಿಕಾರವನ್ನು ಮಂಡಳಿ ಕಾರ್ಯದರ್ಶಿಗಳಿಗೆ ನೀಡಲಾಗಿದೆ. ಈ ವಿಷಯವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ. ಈ ಹಿಂದೆ ನಾನು ತಮ್ಮೆಲ್ಲರಿಗೂ ಪತ್ರದ ಮೂಲಕ ತಿಳಿಸಿರುವಂತೆ,

- ಮಂಡಳಿಯ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿದಂತೆ 2017–18ನೇ ಸಾಲಿಗೆ ಮಂಡಳಿ ಸದಸ್ಯರುಗಳಿಗೆ ಹಂಚಿಕೆಯಾದ ಮೊತ್ತಕ್ಕೆ ಸದಸ್ಯರುಗಳಿಂದ ಕ್ಷೇತ್ರವಾರು ಕ್ರಿಯಾ ಯೋಜನೆಯ ಕಾಮಗಾರಿಗಳ ಪಟ್ಟಿಯನ್ನು ಪಡೆದು ಸರ್ಕಾರಕ್ಕೆ ಸಲ್ಲಿಸಿ ಸದರಿ ಕ್ರಿಯಾ ಯೋಜನೆಗೆ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದ್ದು, ಕ್ರಿಯಾ ಯೋಜನೆಯ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಮಂಡಳಿಯಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗುತ್ತಿದೆ.
- ಮಂಡಳಿಯ ಸಾಮಾನ್ಯ ಸಭೆಯ ನಿರ್ಣಯದಂತೆ ಸರ್ಕಾರದ ವಿವೇಚನಾ ನಿಧಿ ಹಾಗೂ ಅಧ್ಯಕ್ಷರ ವಿವೇಚನಾ ನಿಧಿ ಸೇರಿ ರೂ.650.00ಲಕ್ಷ ಮೀಸಲಿರಿಸಲಾಗಿತ್ತು. ಸದರಿ ಮೊತ್ತದಲ್ಲಿ ಅಧ್ಯಕ್ಷರ ವಿವೇಚನಾ ನಿಧಿಗೆ ರೂ.300ಲಕ್ಷಗಳನ್ನು ಮೀಸಲಿರಿಸಿ ಸರ್ಕಾರ ಅನುಮೋದನೆ ನೀಡಲಾಗಿದ್ದು, ಸದರಿ ಮೊತ್ತಕ್ಕೆ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗುತ್ತಿದೆ.
- ದಿನಾಂಕ: 17–6–2017 ರಂದು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ಕಚೇರಿಯಲ್ಲಿ ಸನ್ಮಾನ್ಯ ಶ್ರೀ. ಎಂ.ಆರ್. ಸೀತಾರಾಂರವರು, ಮಾನ್ಯ ಯೋಜನಾ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಮಂಡಳಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು. ಈ ಸಂದರ್ಭದಲ್ಲಿ ಮಂಡಳಿಯ ಅಧ್ಯಕ್ಷರು ಶಿವಮೊಗ್ಗ ಜಿಲ್ಲೆಯ ಕೆಲವು ಶಾಸಕರು ಸಹ ಹಾಜರಿದ್ದು, ಅನುಷ್ಠಾನಾಧಿಕಾರಿಗಳು ಮಂಡಳಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರಲಾಗಿದೆ.
- ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ ಸುಮಾರು **ರೂ.15.00ಕೋಟಿ ಮೊತ್ತದ** ಹೆಚ್ಚುವರಿ ಕಾಮಗಾರಿಗಳನ್ನು 2017–18 ನೇ ಸಾಲಿನ ಕ್ರಿಯಾ **ಯೋಜನೆಯಲ್ಲಿ** ಸೇರಿಸಿ ಅನುಷ್ಠಾನಗೊಳಿಸಲು ಮಂಡಳಿಗೆ ಸರ್ಕಾರದಿಂದ ನಿರ್ದೇಶನ ನೀಡಿರುವ **ಪತ್ರಗಳು** ಬಂದಿದ್ದು, ಈ ವಿಚಾರವನ್ನು ತಮ್ಮ ಅವಗಾಹನೆಗೆ ತರಲಾಗಿರುತ್ತದೆ.
- ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯು 2017–18 ನೇ ಸಾಲಿಗೆ 25 ವರ್ಷಗಳು ತುಂಬುವುದರಿಂದ ಮಂಡಳಿಯಲ್ಲಿ " ರಜತ ಮಹೋತ್ಸವ " ಕಾರ್ಯಕ್ರಮವನ್ನು ನಡೆಸುವ ತೀರ್ಮಾನ ಕೈಗೊಳ್ಳಬೇಕಾಗಿದ್ದು, ಈ ಸಂಬಂಧ " ರಜತ ಮಹೋತ್ಸವ " ಕಾರ್ಯಕ್ರಮದ ರೂಪುರೇಷೆಗಳ ಕುರಿತು ಈ ಸಭೆಯಲ್ಲಿ ಚರ್ಚಿಸಲಾಗುತ್ತದೆ.

ಕಡೆಯದಾಗಿ ತಾವುಗಳು ಹಿಂದಿನಿಂದ ಸಹಕಾರವನ್ನು ನೀಡುತ್ತಿದ್ದು, ಮುಂದೆ ಕೂಡ ತಮ್ಮ ಸಹಕಾರವನ್ನು ಬಯಸುತ್ತಾ, ಕಾಮಗಾರಿ ಪ್ರಗತಿಯ ಬಗ್ಗೆ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಗುಣಮಟ್ಟವನ್ನು ಕಾಯ್ದುಕೊಂಡು ಸೂಕ್ತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಆದೇಶಿಸಲು ಕೋರುತ್ತೇನೆ. ಬಹಳಷ್ಟು ಕಾಮಗಾರಿಗಳ ಪೈಕಿ ಸಮುದಾಯ ಭವನಗಳ ನಿರ್ಮಾಣ

ಕೆಲಸಕ್ಕೆ ನೀಡುವ ಅನುದಾನವು ಸೂಕ್ತ ಸಮಯದಲ್ಲಿ ಬಳಸದೆ ವಿಳಂಬವಾಗುತ್ತಿರುವ ಬಗ್ಗೆ ಕೂಡ ಸಭೆಯ ಗಮನಕ್ಕೆ ತರಲು ಬಯಸುತ್ತೇನೆ.

ಹಾಗೆಯೇ ಈ ಬಾರಿ ನಾವುಗಳು ಉದ್ದೇಶಿಸಿರುವಂತೆ ಮಾರ್ಚ್ 2018ರೊಳಗೆ ಅನುದಾನವನ್ನು ಸದುಪಯೋಗ ಮಾಡಿಕೊಳ್ಳಲು ಹಾಗೂ ಮುಂದಿನ ಸಾಲಿನ ಅನುದಾನದಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ಹೆಚ್ಚು ಅನುದಾನ ದೊರಕುವಂತೆ ಮಾಡಲು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಎಂದು ತಿಳಿಸಿದರು.

**ವಿಷಯ: 1.ದಿನಾಂಕ: 16-05-2017 ರಂದು ನಡೆದ ಮಂಡಳಿ ಸಭೆಯ ನಡವಳಿಗಳ ಬಗ್ಗೆ ಅನುಸರಣೆಗಳು:**

ಹಿಂದಿನ ಮಂಡಳಿಯ ಸಭೆಯಲ್ಲಿ ಮಂಡಳಿ ಕಾಮಗಾರಿಗಳ ಬದಲಾವಣೆಗೆ ಈ ಹಿಂದೆ ಇದ್ದಂತೆ ಮಂಡಳಿಗೆ ಅಧಿಕಾರ ನೀಡಲು ನಿರ್ಣಯ ಮಾಡಿ ಸರ್ಕಾರದ ಗಮನಕ್ಕೆ ತರಲು ತೀರ್ಮಾನವಾಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂ: ಯೋಇ:29:ಮಪ್ರಮಂ:2017:ಬೆಂಗಳೂರು, ದಿನಾಂಕ:31-8-2017 ರಲ್ಲಿ ಕಾಮಗಾರಿ ಬದಲಾವಣೆಗೆ ಷರತ್ತುಗಳನ್ನು ವಿಧಿಸಿ ಮಂಡಳಿಗೆ ಅಧಿಕಾರವನ್ನು ನೀಡಲಾಗಿದೆ ಎಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

ಕಾಮಗಾರಿ ಬದಲಾವಣೆಗೆ ಸರ್ಕಾರದಿಂದ ನೀಡಿರುವ ಆದೇಶದ ಪ್ರತಿಗಳನ್ನು ಎಲ್ಲ ಸದಸ್ಯರಿಗೆ ನೀಡಲಾಯಿತು. ಮಾನ್ಯ ಕಾರ್ಯದರ್ಶಿ(ಪ್ರಭಾರ) ಇವರು ಮಾತನಾಡುತ್ತಾ, ಈ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ದಿ:17-8-2017ರಂದು ಜರುಗಿದ ಅಂದಾಜು ಸಮಿತಿ ಸಭೆಯಲ್ಲಿ ಬ್ಯಾಡಗಿ ಮತ್ತು ಚನ್ನಗಿರಿ ಕ್ಷೇತ್ರದ ಮಾನ್ಯ ಶಾಸಕರುಗಳು ಸಹ ಪ್ರಸ್ತಾಪಿಸಿದ್ದರೆಂದು ಸಭೆಯ ಗಮನಕ್ಕೆ ತಂದರು.

ಸರ್ಕಾರಕ್ಕೆ ಹೆಚ್ಚುವರಿ ಅನುದಾನವನ್ನು ಮಂಡಳಿಗೆ ಬಿಡುಗಡೆಗೆ ಮಾಡಲು ಕೋರಿ ಪ್ರಸ್ತಾವನೆ ಸಲ್ಲಿಸಲು ಹಿಂದಿನ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಸದರಿ ಸಭೆಯ ನಿರ್ಣಯದಂತೆ, ಮಂಡಳಿಗೆ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ಮಂಡಳಿಯ ಸಭಾ ನಡವಳಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

2017-18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಅನುಮೋದಿಸುವ ಕುರಿತು ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, 2017-18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಮಂಡಳಿಯ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಆಗಿದ್ದು ಮಂಡಳಿಯ 2017-18 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸರ್ಕಾರದ ಯೋಜನಾ ಇಲಾಖೆಯ ದಿನಾಂಕ: 23-8-2017 ರ ಪತ್ರದಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಕ್ರಿಯಾ ಯೋಜನೆಯನ್ನು ಅನುಮೋದನೆ ನೀಡುವಾಗ ಕೆಲವು ಷರತ್ತುಗಳನ್ನು ವಿಧಿಸಿದ್ದು, ಸದರಿ ಷರತ್ತುಗಳಲ್ಲಿ ಪ್ರಮುಖವಾಗಿ ಈ ಅಂಶವನ್ನು ತಿಳಿಸಲಾಗಿದೆ.

1. ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅವಕಾಶವಿರುವುದಿಲ್ಲ.

   *ವಸತಿಗೃಹಗಳ ನಿರ್ಮಾಣ,

   *ವಾಣಿಜ್ಯ ಉದ್ದೇಶವನ್ನು ಹೊಂದಿರುವ ಕಾಮಗಾರಿಗಳು,

   * ಆವರ್ತಕ ವೆಚ್ಚ, ನಿರ್ವಹಣಾ ವೆಚ್ಚ, ಭೂ ಸ್ವಾಧೀನ ಮತ್ತು ಭೂ ಪರಿಹಾರಕ್ಕೆ

ಸಂಬಂಧಪಟ್ಟ ಕಾಮಗಾರಿಗಳು,

* ಯಾವುದೇ ಸಂಸ್ಥೆಗೆ ಸಾಲ/ಅನುದಾನ ನೀಡುವುದು,
* ಸ್ಮಾರಕ ಮತ್ತು ಸ್ಮಾರಕ ಕಟ್ಟಡಗಳು,
* ವೈಯಕ್ತಿಕ ಫಲಾನುಭವಿ ಯೋಜನೆಗಳು,
* ಧಾರ್ಮಿಕ ಸ್ಥಳಗಳಲ್ಲಿ ಕಾಮಗಾರಿಗಳು,

2. ಮಂಡಳಿಯು ಸಲ್ಲಿಸಿರುವ ಕ್ರಿಯಾ ಯೋಜನೆಯು ಮಂಡಳಿಯ ಧ್ಯೇಯಗಳಿಗೆ ಅನುಗುಣವಲ್ಲದ ಕೆಲವು ಪ್ರಸ್ತಾವನೆಗಳನ್ನು ಒಳಗೊಂಡಿರುವುದರಿಂದ ಈ ಕೆಳಕಂಡ ಪ್ರಸ್ತಾವನೆಗಳನ್ನು ಅನುಮೋದಿಸಿರುವುದಿಲ್ಲ.
   * ಕೊಳವೆ ಬಾವಿ ಕೊರೆಯುವುದು, ತೆರೆದ ಬಾವಿ ಕೊರೆಯುವುದು ಹಾಗೂ ಪಂಪ್ ಸೆಟ್ ಖರೀದಿಸುವುದು.
   * ಸಿಂಟೆಕ್ಸ್ ಟ್ಯಾಂಕ್ ಖರೀದಿ, ಪೈಪ್ ಲೈನ್ ಖರೀದಿ
   * ಜನರೇಟರ್ ಅಥವಾ ಯಾವುದೇ ಯಂತ್ರ ಖರೀದಿ
   * ಲ್ಯಾಬ್ ಸ್ಥಾಪನೆ ಪ್ರಸ್ತಾವನೆಗಳು ಮತ್ತು ಯಾವುದೇ ವೈಯಕ್ತಿಕ ಫಲಾನುಭವಿಗಳಿಗೆ ಪರಿಕರಣ ವಿರಣೆ, ಹೈ ಮಾಸ್ಕ್ ಲೈಟ್ ಅಳವಡಿಕೆಗೆ ಬೀದಿ ದೀಪ ವಿದ್ಯುತೀಕರಣಕ್ಕೆ ಅವಕಾಶವಿಲ್ಲ.
3. ಸದರಿ ಕಾಮಗಾರಿಗಳ ಬದಲು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಪ್ರಸ್ತಾವನೆ ನೀಡಲು ತಿಳಿಸುವುದು ಅಥವಾ ಬೇರೆ ಪ್ರಸ್ತಾವನೆ ಸಲ್ಲಿಸಬೇಕೆಂದು ಸಂಬಂಧಪಟ್ಟವರಿಗೆ ಸೂಚಿಸುವುದು.
4. ರಸ್ತೆ ಅಭಿವೃದ್ಧಿಯಡಿ ಮಣ್ಣಿನ ರಸ್ತೆ ನಿರ್ಮಾಣ ಹಾಗೂ ಜಲ್ಲಿ ಮಾತ್ರ ಹಾಕಲು ಆಸ್ಪದವಿಲ್ಲ. ಡಾಂಬರೀಕರಣ ಅಥವಾ ಕಾಂಕ್ರೀಟೀಕರಣಗೊಳಿಸಲು ಮಾತ್ರ ಅನುಮೋದನೆ ನೀಡಲಾಗಿದೆ.
5. ರೂ.3.00ಲಕ್ಷಕ್ಕಿಂತ ಕಡಿಮೆ ಮೊತ್ತದ ಕಾಮಗಾರಿಗೆ ಅನುಮೋದನೆ ನೀಡುವಂತಿಲ್ಲ. ಈಗಾಗಲೇ ಅನುಮೋದನೆ ನೀಡಿದಲ್ಲಿ ಬದಲಿ ಕಾಮಗಾರಿ ಪ್ರಸ್ತಾವನೆ ಸಲ್ಲಿಸಲು ಸಂಬಂಧಪಟ್ಟವರಿಗೆ ತಿಳಿಸುವುದು ಅಥವಾ ಸದರಿ ಕಾಮಗಾರಿಗಳನ್ನು ಕೈಬಿಡುವುದು.
6. ಸರ್ಕಾರದ ಅನುಮೋದನೆಗೊಂಡ ಕಾಮಗಾರಿ ಮೊತ್ತವನ್ನು ಪುನ: ವಿಭಜಿಸಲು ಅನುಮೋದನೆ ನೀಡುವಂತಿಲ್ಲ. ಶಿಫಾರಸು ಮಾಡುವಂತಿಲ್ಲ. ಬದಲಿ ಕಾಮಗಾರಿ ಪ್ರಸ್ತಾವನೆ ಮಾತ್ರ ಅನುಮೋದನೆಗೆ ಸಲ್ಲಿಸುವುದು.
7. ಮಂಡಳಿಯ ಅಧ್ಯಕ್ಷರು ಪ್ರಸ್ತಾಪಿಸಿರುವ ರೂ.430.02 ಲಕ್ಷಗಳ ಕಾಮಗಾರಿಗಳನ್ನು ರೂ.300.00ಲಕ್ಷಗಳಿಗೆ ಸೀಮಿತಗೊಳಿಸಿ ಮರು ಪ್ರಸ್ತಾವನೆ ಸಲ್ಲಿಸಲು ಅವರಿಗೆ ತಿಳಿಸುವುದು ಎಂದು ಸರ್ಕಾರಿ ಆದೇಶದಲ್ಲಿ ತಿಳಿಲಾಗಿದೆ ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

ಹಿಂದಿನ ಸಭೆಯ ನಿರ್ಣಯದಂತೆ 2017-18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗಳಿಗೆ 2011ರ ಜನಗಣತಿಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ

ಜನಸಂಖ್ಯೆಯ ಆಧಾರದ ಮೇಲೆ ಎಲ್ಲಾ ವಿದಾನಸಭಾ ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

ಮಂಡಳಿಯಿಂದ ನಿರ್ಮಿಸಲಾಗಿರುವ ತೂಗು ಸೇತುವೆ ನಿರ್ವಹಣೆಗೆ ವಿಶೇಷ ಅನುದಾನವನ್ನು ಸರ್ಕಾರದಿಂದ ಪಡೆದುಕೊಳ್ಳುವ ಬಗ್ಗೆ ಹಿಂದಿನ ಸಭೆಯಲ್ಲಿ ನಿರ್ಣಯವಾಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:17-6-2017ರಂದು ಮಾನ್ಯ ಯೋಜನಾ ಸಚಿವರು ಮಂಡಳಿಯ ಕಚೇರಿಗೆ ಆಗಮಿಸಿ ಮಂಡಳಿ ಕಾಮಗಾರಿಗಳ ಪ್ರಗತಿ ಪರಿಶೀಲಿಸುವಾಗ ಸದರಿ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಲಾಯಿತು. ಮಾನ್ಯ ಸಚಿವರು ಈ ವಿಷಯದ ಬಗ್ಗೆ ಮಾಡನಾಡಿ ಹೊಸ ತೂಗು ಸೇತುವೆ ಕಾಮಗಾರಿಗೆ ಟೆಂಡರ್ ಕರೆಯುವಾಗ 5 ವರ್ಷಗಳ ಅವಧಿಗೆ ನಿರ್ವಹಣಾ ವೆಚ್ಚವನ್ನು ಅಂದಾಜಿನಲ್ಲಿ ಸೇರಿಸಬೇಕೆಂದು ತಿಳಿಸಿರುತ್ತಾರೆ ಎಂದು ಅಧ್ಯಕ್ಷರು ತಿಳಿಸಿದರು.

ಸಹಕಾರ ಸಂಘಗಳ ಕಟ್ಟಡಗಳಿಗೆ ಮಂಡಳಿ ವತಿಯಿಂದ ಅನುದಾನ ಕೊಡುವ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚೆ ಆಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ 2017-18ನೇ ಸಾಲಿನ ಮಂಡಳಿಯ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವಾಗ ದಿನಾಂಕ:23-8-2017 ರ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡಂತೆ ಷರತ್ತು ವಿಧಿಸಿ

ಸೊಸೈಟಿ ಅಧಿನಿಯಮದಡಿ ನೊಂದಾಯಿಸಲ್ಪಟ್ಟ ಖಾಸಗಿ ಸೊಸೈಟಿ ಅಥವಾ ಭಾರತೀಯ ಟ್ರಸ್ಟ್ ನಿಯಮಗಳ ಅಡಿ ನೊಂದಾಯಿಸಲ್ಪಟ್ಟ ಟ್ರಸ್ಟ್‌ಗಳಿಗೆ ಸಮುದಾಯ ಭವನ ನಿರ್ಮಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

(ಅ) ಅಂತಹ ಟ್ರಸ್ಟ್ /ಸೊಸೈಟಿಗಳು ನೊಂದಣಿಯಾಗಿ ಕನಿಷ್ಟ ಮೂರು ವರ್ಷ ಪೂರೈಸಿರಬೇಕು ಹಾಗೂ ಸೊಸೈಟಿ ನೊಂದಣಿ ಪ್ರತಿ ವರ್ಷ ನವೀಕರಿಸಬೇಕು.

(ಆ) ಅಂತಹ ಸೊಸೈಟಿ/ಟ್ರಸ್ಟ್‌ಗಳು ಒಂದೇ ಕುಟುಂಬದ ಸದಸ್ಯರನ್ನು ಒಳಗೊಂಡಿರಬಾರದು.

(ಇ) ಈ ಸಂಸ್ಥೆಗಳು ಲಾಭದಾಯಕ ಉದ್ದೇಶ ಹೊಂದಿರಬಾರದು.

(ಈ) ಪ್ರತಿ ವರ್ಷ ಲೆಕ್ಕ ಪರಿಶೋಧನೆಯಾಗಿರಬೇಕು.

ಅನುಮೋದಿಸಲಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

**ತೀರ್ಮಾನ: ಸಭೆಯು ದಿನಾಂಕ: 16-5-2017 ರ ಸಭೆಯ ನಡವಳಿ ಮೇಲೆ ತೆಗೆದುಕೊಂಡ ಅನುಪಾಲನಾ ವರದಿಯನ್ನು ಅನುಮೋದಿಸಿತು.**

**ವಿಷಯ:-2: 2017-18ನೇ ಸಾಲಿನ ಮಂಡಳಿಯ ಕ್ರಿಯಾ ಯೋಜನೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಕುರಿತು.**

2017-18ನೇ ಸಾಲಿಗೆ ಸರ್ಕಾರವು ಮಂಡಳಿಗೆ ಆಯವ್ಯಯ ರೂ.60 ಕೋಟಿ ಅನುದಾನ ನಿಗಧಿಪಡಿಸಿದೆ. ಪ್ರಾರಂಭ ಶಿಲ್ಕು ರೂ.2131.57 ಲಕ್ಷಗಳು ಇರುತ್ತದೆ. ಇದರಲ್ಲಿ, ಮುಂದುವರೆದ ಕಾಮಗಾರಿಗಳಿಗೆ ರೂ.3230.19 ಲಕ್ಷ ನಿಗಧಿಪಡಿಸಿದ್ದು, ದಿನಾಂಕ:25-11-2017ರವರೆಗೆ ಕಾಮಗಾರಿಗಳಿಗೆ ರೂ.1601.58 ಲಕ್ಷ ವೆಚ್ಚ ಆಗಿದ್ದು, ಮುಂದುವರೆದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಜನವರಿ 2018ರ ಅಂತ್ಯಕ್ಕೆ ಬಹುತೇಕ ಕಾಮಗಾರಿಗಳು ಪೂರ್ಣಗೊಳ್ಳುತ್ತವೆ ಎಂದು ತಿಳಿಸಿ, ಜಿಲ್ಲಾವಾರು/ತಾಲ್ಲೂಕುವಾರು/ಕಾಮಗಾರಿವಾರು ಪ್ರಗತಿ ವಿವರಗಳನ್ನು ಕಾರ್ಯದರ್ಶಿ(ಪ್ರಭಾರ)ರವರು ಸಭೆಯ ಗಮನಕ್ಕೆ ತಂದರು.

ಹೊಸ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ರೂ.6340.538 ಲಕ್ಷ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ದೊರೆತಿರುತ್ತದೆ. ಇದುವರೆಗೆ ರೂ.3091.93 ಲಕ್ಷ ಮೊತ್ತದ 533 ಕಾಮಗಾರಿಗಳಿಗೆ ಮಂಡಳಿಯಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂಬ ವಿಷಯವನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತರುತ್ತಾ, ಹೊಸ ಕಾಮಗಾರಿಗಳ ವಿವರಗಳನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತಂದರು.

ಸರ್ಕಾರದಿಂದ ಮಂಡಳಿಗೆ ಹೆಚ್ಚುವರಿ ಅನುದಾನ ಕೋರಿ ಮಾನ್ಯ ಮುಖ್ಯ ಮಂತ್ರಿಗಳ ಬಳಿ ನಿಯೋಗ ಹೋಗಬೇಕೆಂದು ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಧರ್ಮಸೇನ್ ಅವರು ತಿಳಿಸಿದರು. ಇದಕ್ಕೆ ನಾಮ ನಿರ್ದೇಶನ ಸದಸ್ಯರಗಳು ಸಹಮತ ವ್ಯಕ್ತಪಡಿಸಿದರು. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮುಖ್ಯಮಂತ್ರಿಗಳ ಕಚೇರಿಯಿಂದ ಭೇಟಿಗೆ ದಿನಾಂಕ: ಪಡೆದು ಕ್ರಮ ವಹಿಸಲಾಗುತ್ತದೆಂದು ತಿಳಿಸಿದರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಧರ್ಮಸೇನ್ ರವರು ಮಾತನಾಡುತ್ತಾ ಚಾಮರಾಜನಗರ ಜಿಲ್ಲೆಯಲ್ಲಿ 2015–16ನೇ ಸಾಲಿನಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಅರಕಲವಾಡಿ ಗ್ರಾಮದಲ್ಲಿ ಅನುಷ್ಠಾನ ಮಾಡಿರುವ ರಸ್ತೆ ಕಾಮಗಾರಿ ಬಗ್ಗೆ ದೂರು ಇದ್ದು ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ಕೋರಿದರು. ಸದರಿ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

ಚನ್ನಗಿರಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮಾತನಾಡುತ್ತಾ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಟೆಂಡರ್ ಕರೆದಾಗ, ಕೆಲವು ಪ್ರಕರಣಗಳಲ್ಲಿ ಶೇ.20% ರಷ್ಟು ಕಡಿಮೆ ಮೊತ್ತಕ್ಕೆ ಟೆಂಡರ್‌ಗೆ ಹಾಕಿರುತ್ತಾರೆ. ಕಾಡಾ ಸಂಸ್ಥೆಯಲ್ಲಿ ಶೇ.40% ಕಡಿಮೆ ಹಾಕಿರುತ್ತಾರೆ. ಇಂತಹ ಪ್ರಕರಣಗಳಲ್ಲಿ ಗುಣಮಟ್ಟ ಕಾಪಾಡುವುದು ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿಯ ಕಾಮಗಾರಿಗಳಲ್ಲಿ ಪಿ.ಆರ್.ಇ.ಡಿ./ಪಿ.ಡಬ್ಲ್ಯೂಡಿ ವತಿಯಿಂದ ರೂ.5.00ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿ ಇರುತ್ತದೆ. ಕೆಲವು ಸಮುದಾಯ ಭವನ ಕಾಮಗಾರಿಗಳ ಪ್ರಗತಿ ಪೂರ್ಣವಾಗಿರುವುದಿಲ್ಲ. ಮಂಡಳಿಯಲ್ಲಿ ಅನುಷ್ಠಾನ ಅಧಿಕಾರಿಗಳ ಸಭೆಯನ್ನು ಕರೆದು ಪ್ರಗತಿ ಸಾಧಿಸಲು ಸೂಚನೆ ನೀಡಲಾಗಿರುತ್ತದೆ. ಅಂದಾಜು ಮೊತ್ತಕ್ಕಿಂತ ಕಡಿಮೆ ಹಣಕ್ಕೆ ಟೆಂಡರ್ ನಮೂದಿಸಿದಾಗ, ಸರ್ಕಾರಿ ನಿಯಮಾನುಸಾರ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಚನ್ನಗಿರಿ ವಿಧಾನ ಸಭಾ ಕ್ಷೇತ್ರದ ಶಾಸಕರು ಮಾತನಾಡುತ್ತಾ, ಮಂಡಳಿಯ ಸಭೆಯು 2017ರ ಮೇ ತಿಂಗಳಲ್ಲಿ ಜರುಗಿದ್ದು, ಇದುವರೆವಿಗೂ ಕ್ರಿಯಾ ಯೋಜನೆಯ ಎಲ್ಲಾ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ, ವಿಳಂಬವಾಗುತ್ತಿದೆ ಎಂದು ತಿಳಿಸಿದರು. ಈ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿಯ ಸಭೆಯಲ್ಲಿ ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳಿಗೆ ಅನುಮೋದನೆಯಾದ ನಂತರ ಅನುಷ್ಠಾನಾಧಿಕಾರಿಗಳಿಗೆ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಲು ಪತ್ರ ಬರೆಯಲಾಗಿದೆ. ಈ ಹಿಂದೆ, ಕೆಲವು ಕ್ಷೇತ್ರಗಳಲ್ಲಿ, ಶಾಸಕರುಗಳು ನಿರ್ಮಿತಿ ಕೇಂದ್ರಕ್ಕೆ ರಸ್ತೆ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ವಹಿಸಲಾಗಿದ್ದು, ಸರ್ಕಾರದ ಆದೇಶದನುಸಾರ ಪ್ರಸಕ್ತ ಸಾಲಿನಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ರಸ್ತೆ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಅವಕಾಶವಿರುವುದಿಲ್ಲ. ಇದರಿಂದಾಗಿ ಏಜೆನ್ಸಿಗಳನ್ನು ಬದಲಾವಣೆ ಮಾಡುವ ಸಂದರ್ಭ ಕೆಲವು ಪ್ರಕರಣಗಳಲ್ಲಿ ಬಂದಿರುತ್ತದೆ. ಕೆಲವು ಪ್ರಕರಣಗಳಲ್ಲಿ ಕಾಮಗಾರಿಗಳ ಬದಲಾವಣೆಗೆ ಮಾನ್ಯ ಶಾಸಕರುಗಳು ಕೋರುತ್ತಿದ್ದಾರೆ ಮತ್ತು ಸರ್ಕಾರದಿಂದ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಾಗ ಬೀದಿ ದೀಪ, ಕೊಳವೆ ಬಾವಿ ಕೊರೆಯುವುದು, ಸಿಂಟೆಕ್ಸ್ ಖರೀಧಿ,ಪೈಪ್ ಲೈನ್ ಖರೀಧಿ, ಹೈಮಾಸ್ಕ್ ಲೈಟ್ ಅಳವಡಿಕೆ, ಇಂಥಹ ಪ್ರಕರಣಗಳಿಗೆ ನಿಷೇಧ ಮಾಡಿರುವುದರಿಂದ ಬೇರೆ

ಕಾಮಗಾರಿಗಳ ಪ್ರಸ್ತಾವನೆಗಳನ್ನು ಪಡೆಯಲು ಕ್ರಮ ವಹಿಸಲಾಗಿದೆ. ಮಂಡಳಿಗೆ ಅನುಷ್ಠಾನಾಧಿಕಾರಿಗಳು ಸಲ್ಲಿಸಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಸರ್ಕಾರದ ಯೋಜನಾ ಇಲಾಖೆಯ ದಿ:22-6-2017 ರಿಂದ ದಿನಾಂಕ:4-9-2017 ರವರೆಗೆ ವಿವಿಧ ದಿನಾಂಕಗಳ ಪತ್ರಗಳಲ್ಲಿ ಒಟ್ಟಾರೆ 203 ಕಾಮಗಾರಿಗಳ ರೂ.1972.6 ಲಕ್ಷ ಮೊತ್ತದ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಮಾನ್ಯ ಶಾಸಕರುಗಳು ಪ್ರಸ್ತಾಪಿಸಿದರು. ಈ ಬಗ್ಗೆ ನಾಮ ನಿರ್ದೇಶಿತ ಸದಸ್ಯರಾದ ಶ್ರೀಮತಿ.ಸಾವಿತ್ರಿ ಗಂಗಪ್ಪ ಇವರು ಮಾತನಾಡುತ್ತಾ, ನಾಮ ನಿರ್ದೇಶಿತ ಸದಸ್ಯರುಗಳಿಗೆ ಕಾಮಗಾರಿಗಳ ಪ್ರಸ್ತಾವನೆ ಮಾಡಲು ರೂ.10.00ಲಕ್ಷಗಳು ಮಾತ್ರ ನೀಡಲಾಗಿದ್ದು, ಸರ್ಕಾರದ ವಿವೇಚನಾ ನಿಧಿಯಡಿ ಹೆಚ್ಚಿನ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ. ನಾಮ ನಿರ್ದೇಶಿತ ಸದಸ್ಯರಿಗೆ ಇನ್ನು ಕೆಲವು ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ನೀಡಬೇಕೆಂದು ಕೋರಿದರು. ಮಾನ್ಯ ಚನ್ನಗಿರಿ ಕ್ಷೇತ್ರದ ಶಾಸಕರು ಮಾತನಾಡುತ್ತಾ ಸರ್ಕಾರದ ಪತ್ರಗಳಲ್ಲಿ ತಿಳಿಸಿರುವ ಕಾಮಗಾರಿಗಳ ಪಟ್ಟಿಯನ್ನು ನೋಡಿದಾಗ ಬಹಳಷ್ಟು ತಾರತಮ್ಯಗಳು ಇರುತ್ತದೆ. ಚನ್ನಗಿರಿ ತಾಲ್ಲೂಕುಗೆ 5 ಕಾಮಗಾರಿಗಳಿಗೆ ರೂ.55ಲಕ್ಷಗಳ ಮೊತ್ತಕ್ಕೆ ಕಾಮಗಾರಿಗಳನ್ನು ಮಾತ್ರ ನೀಡಲಾಗಿದೆ. ಆದರೆ, ಚಿಕ್ಕಮಗಳೂರು ಕ್ಷೇತ್ರಕ್ಕೆ ರೂ.125 ಲಕ್ಷಗಳು, ವೀರಾಜಪೇಟೆ ಕ್ಷೇತ್ರಕ್ಕೆ ರೂ.177ಲಕ್ಷಗಳು, ಶಿವಮೊಗ್ಗ ಗ್ರಾಮಾಂತರ ಕ್ಷೇತ್ರಕ್ಕೆ ರೂ.144ಲಕ್ಷಗಳು, ಹುಣಸೂರು ಕ್ಷೇತ್ರಕ್ಕೆ ರೂ. 210 ಲಕ್ಷಗಳನ್ನು ನೀಡಲಾಗಿರುತ್ತದೆ ಎಂದು ತಿಳಿಸಿದರು. ಮಾನ್ಯ ಬ್ಯಾಡಗಿ ಕ್ಷೇತ್ರದ ಶಾಸಕರು ಮಾತನಾಡುತ್ತಾ, ಸರ್ಕಾರದ ಹಂತದಲ್ಲಿ ಸರ್ಕಾರದ ವಿವೇಚನಾ ನಿಧಿಯಡಿ ಕ್ಷೇತ್ರಗಳಿಗೆ ಮಾನ್ಯ ಸಚಿವರು ಕಾಮಗಾರಿಗಳನ್ನು ಅನುಮೋದನೆ ಮಾಡಿರುತ್ತಾರೆ. ಮಂಡಳಿಯಿಂದ ಮಾಡಿರುವುದಿಲ್ಲ ಸದರಿ ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕು ಎಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ದಿನಾಂಕ: 16-5-2017ರಂದು ಜರುಗಿದ ಮಂಡಳಿ ಸಭೆಯ ನಿರ್ಣಯದಂತೆ, ಮಾನ್ಯ ಶಾಸಕರುಗಳಿಗೆ ಪ್ರತಿ ಕ್ಷೇತ್ರಕ್ಕೆ ರೂ.40.00 ಲಕ್ಷಗಳನ್ನು ಬಂಡವಾಳ ವೆಚ್ಚದಲ್ಲಿ ಹಂಚಿಕೆ ಮಾಡಲಾಗಿದೆ, ವಿಶೇಷ ಘಟಕ ಯೋಜನೆ/ಗಿರಿಜನ ಉಪ ಯೋಜನೆ ಅನುದಾನವನ್ನು ಉಳಿದಂತೆ 2011 ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡಲಾಗಿದೆ. ಅಧ್ಯಕ್ಷರಿಗೆ ಬಂದಿರುವ ಪ್ರಸ್ತಾವನೆಗಳ ಕಾಮಗಾರಿಗಳಿಗೆ ಸರ್ಕಾರವು ರೂ.300ಲಕ್ಷಗಳಿಗೆ ಮಾತ್ರ ಸೀಮಿತ ಮಾಡಿದ್ದು, ಸದರಿ ಮೊತ್ತಕ್ಕೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಕಾಮಗಾರಿಗಳಿಗೆ ಹಂಚಿಕೆ ನೀಡಲಾಗಿದೆ. ಸರ್ಕಾರದಿಂದ ದಿನಾಂಕ:22-6-2017ರಿಂದ ದಿನಾಂಕ:4-9-2017 ರವರೆಗೆ ಬಂದಿರುವ ಪತ್ರಗಳಲ್ಲಿ 203 ಕಾಮಗಾರಿಗಳಿಗೆ ರೂ.1972.6ಲಕ್ಷಗಳ ಮೊತ್ತಕ್ಕೆ ಸರ್ಕಾರದಿಂದ ನೇರವಾಗಿ ಕಾಮಗಾರಿಗಳ ಪಟ್ಟಿಯನ್ನು ನೀಡಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕೆಂದು ತಿಳಿಸಲಾಗಿದೆ. ದಿನಾಂಕ:23-8-2017 ರ ಯೋಜನಾ ಇಲಾಖೆಯ ಸರ್ಕಾರಿ ಆದೇಶದಲ್ಲಿ 203 ಕಾಮಗಾರಿಗಳನ್ನು 2017-18ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಬೇಕು, ಈ ಕಾಮಗಾರಿಗಳಿಗೆ ಕೊರತೆ ಇರುವ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಭರಿಸತಕ್ಕದ್ದೆಂದು ತಿಳಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಮಂಡಳಿಗೆ ಆಡಳಿತ ವೆಚ್ಚಕ್ಕೆ ರೂ.52.00 ಲಕ್ಷ ನಿಗಧಿಯಾಗಿರುತ್ತದೆ. ಮಂಡಳಿಗೆ ಆಡಳಿತ ವೆಚ್ಚದಲ್ಲಿ ಸುಮಾರು ರೂ.75.00ಲಕ್ಷಗಳ ಕೊರತೆ ಬೀಳುತ್ತದೆ. ಸರ್ಕಾರದ ವಿವೇಚನಾ ನಿಧಿಯಡಿ ನೀಡಿರುವ ಕಾಮಗಾರಿಗಳನ್ನು ಸೇರಿಸಿಕೊಂಡು ಒಟ್ಟಾರೆ ಸುಮಾರು ರೂ.15 ಕೋಟಿ ಈ ವರ್ಷ ಕೊರತೆ ಬೀಳುವ

ಸಾಧ್ಯತೆ ಇರುತ್ತದೆ. ಸರ್ಕಾರಕ್ಕೆ ಹೆಚ್ಚುವರಿ ಅನುದಾನವನ್ನು ಕೋರಿ ಮಂಡಳಿಯಿಂದ ಪತ್ರ ಬರೆಯಲಾಗಿದ್ದು, ಹಾಲಿ ಮಂಡಳಿಯಲ್ಲಿ ಇರುವ ಅನುದಾನವನ್ನು ವೆಚ್ಚ ಮಾಡದೇ ಹೆಚ್ಚುವರಿ ಅನುದಾನದ ಕೋರಿಕೆಗೆ ಒಪ್ಪುವುದಿಲ್ಲವೆಂದು ಸರ್ಕಾರದ ಪತ್ರದಲ್ಲಿ ತಿಳಿಸಲಾಗಿದೆ, ಸರ್ಕಾರದಿಂದ ಮಂಗಳೂರು ತಾಲ್ಲೂಕಿನ ಒಂದು ಕ್ಷೇತ್ರದ ಕಾಮಗಾರಿಗಳ ಪಟ್ಟಿಗೆ ಅನುಮೋದನೆ ಆಗುವುದು ಬಾಕಿ ಇರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಪಸನ್ನಕುಮಾರ್ ರವರು ಮಾತನಾಡುತ್ತಾ ಸರ್ಕಾರದ ವಿವೇಚನಾ ನಿಧಿಯಡಿ ಅನುಷ್ಠಾನ ಮಾಡಲು ತಿಳಿಸಿರುವ ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕೆಂದು ತಿಳಿಸಿದರು. ಬ್ಯಾಡಗಿ ಕ್ಷೇತ್ರದ ಶಾಸಕರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

**ತೀರ್ಮಾನ:** ಸಭೆಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಸರ್ಕಾರದ ವಿವೇಚನಾ ನಿಧಿಯಡಿ ತಿಳಿಸಿರುವ ರೂ.1972.6 ಲಕ್ಷ ಮೊತ್ತದ 203 ಕಾಮಗಾರಿಗಳನ್ನು ಸಹ ಒಳಗೊಂಡಂತೆ, 2017-18 ನೇ ಸಾಲಿನ ಕ್ರಿಯಾ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕನಿಷ್ಠ ರೂ.3.00ಲಕ್ಷ ಅಂದಾಜು ಮೊತ್ತ ಇರುವ ನಿಯಮವನ್ನು ಸಡಿಲಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ: 3: 2018-19ನೇ ಸಾಲಿನ ಮಂಡಳಿಯ ಆಯವ್ಯಯ ಪ್ರಸ್ತಾವನೆಯನ್ನು ಅನುಮೋದಿಸುವ ಕುರಿತು.**

2018-19ನೇ ಸಾಲಿಗೆ ಮಂಡಳಿಯ ಆಯವ್ಯಯವನ್ನು ರೂ.250 ಕೋಟಿಗೆ ತಯಾರಿಸಲಾಗಿದ್ದು, ವಿವರ ಈ ಕೆಳಕಂಡಂತೆ ಇರುತ್ತದೆಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

1. ಮೂಲಭೂತ ಅಭಿವೃದ್ಧಿ ಕಾಮಗಾರಿಗಳು
   (ಅ)ಸಾಮಾನ್ಯ ಯೋಜನೆ-ರೂ.6500 ಲಕ್ಷಗಳು,
   (ಆ)ವಿಶೇಷ ಘಟಕ ಯೋಜನೆ ರೂ.4543 ಲಕ್ಷಗಳು,
   (ಇ)ಗಿರಿಜನ ಉಪಯೋಜನೆ ರೂ.1130 ಲಕ್ಷಗಳು,
2. ತೂಗು ಸೇತುವೆ/ ಕಾಲು ಸೇತುವೆ ನಿರ್ಮಾಣ -ರೂ.2527 ಲಕ್ಷಗಳು.
3. ವಿಶಿಷ್ಟ ಕಾರ್ಯಕ್ರಮಗಳು_ -ಶುದ್ಧ ಕುಡಿಯುವ ನೀರಿನ ಘಟಕ,
   ಸ್ವತಂತ್ರ ವಿದ್ಯುತ್ ಘಟಕ, ದ್ರವ/ಘನ ತ್ಯಾಜ್ಯ
   ಶುದ್ಧೀಕರಣ ಘಟಕ ಸ್ಥಾಪನೆ ಮುಂತಾದವು- ರೂ 1500ಲಕ್ಷಗಳು.
4. ನಬಾರ್ಡ್ ಕಾರ್ಯಕ್ರಮಗಳು ರೂ.8600 ಲಕ್ಷಗಳು.
5. ಆಡಳಿತ ವೆಚ್ಚಗಳು ರೂ.200 ಲಕ್ಷಗಳು.

**ನಿರ್ಣಯ:** ಸಭೆಯು ಮಂಡಳಿಯ 2018-19ನೇ ಸಾಲಿನ ಆಯವ್ಯಯದ ಬಗ್ಗೆ ಚರ್ಚಿಸಿ ರೂ. 250.00 ಕೋಟಿ ಮೊತ್ತದ ಆಯವ್ಯಯಕ್ಕೆ ಅನುಮೋದನೆ ನೀಡಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.

**ವಿಷಯ:4. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ 25ನೇ ವರ್ಷದ " ರಜತ ಮಹೋತ್ಸವ " ಕಾರ್ಯಕ್ರಮ ಆಯೋಜನೆ ಕುರಿತು:**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿಯು 1993 ರಿಂದ ಕಾರ್ಯ ನಿರ್ವಹಿಸುತ್ತಿದೆ. ಪ್ರಸಕ್ತ ಮಂಡಳಿಯು ಪ್ರಾರಂಭವಾಗಿ 24 ವರ್ಷಗಳು ಪೂರ್ಣಗೊಂಡಿದ್ದು, 25ನೇ ವರ್ಷದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ 13 ಜಿಲ್ಲೆಗಳ ಮಾನ್ಯ ಶಾಸಕರುಗಳು ಸೂಚಿಸಿರುವ ಕಾಮಗಾರಿಗಳನ್ನು ಅನುಷ್ಠಾನ ಮಾಡುತ್ತಿದ್ದು, 25ನೇ ವರ್ಷ ಪೂರ್ಣಗೊಳ್ಳುವ ಸಂದರ್ಭದಲ್ಲಿ ರಜತ ಮಹೋತ್ಸವ ಆಚರಿಸಬಹುದಾಗಿದೆ. ರಜತ ಮಹೋತ್ಸವ ಆಚರಿಸುವುದಕ್ಕೆ ಸರ್ಕಾರದಿಂದ ಅನುಮೋದನೆ ಅವಶ್ಯಕತೆ ಇರುತ್ತದೆ. ಹಾಗೂ ಅನುದಾನ ಬೇಕಾಗಿರುತ್ತದೆ ಎಂದು ತಿಳಿಸಿ, ಸಭೆಯಲ್ಲಿ ಈ ವಿಷಯ ಕುರಿತು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಸದರಿ ವಿಷಯದ ಬಗ್ಗೆ ಮಾನ್ಯ ಚನ್ನಗಿರಿ ವಿಧಾನ ಸಭಾ ಕ್ಷೇತ್ರದ ಶಾಸಕರು ಮಾತನಾಡುತ್ತಾ, ರಜತ ಮಹೋತ್ಸವವನ್ನು ಆಚರಿಸುವುದು ಸೂಕ್ತವೆಂದು ತಿಳಿಸಿದರು. ಇದಕ್ಕೆ ಬ್ಯಾಡಗಿ ಕ್ಷೇತ್ರದ ಶಾಸಕರಾದ ಶ್ರೀ.ಶಿವಣ್ಣ ರವರು ಸಹಮತ ವ್ಯಕ್ತಪಡಿಸಿದರು. ನಾಮ ನಿರ್ದೇಶಿತ ಸದಸ್ಯರುಗಳಾದ ಶ್ರೀ. ಎ.ಬಿ ಮಾಚಯ್ಯ, ಶ್ರೀ.ಎಸ್.ಡಿ..ನಾಯಕ್ ಇವರುಗಳು ಮಾತನಾಡುತ್ತಾ, ರಜತ ಮಹೋತ್ಸವ ಆಚರಿಸುವುದು ಅವಶ್ಯಕತೆ ಇದೆ 13 ಜಿಲ್ಲೆಗಳಲ್ಲಿ ಪ್ರತಿ ಕ್ಷೇತ್ರದಲ್ಲಿ ಮಂಡಳಿ ವತಿಯಿಂದ ಕನಿಷ್ಠ ಒಂದು ವಿಶಿಷ್ಟ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು, ಹಿಂದಿನ ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸಬೇಕು, ವಿಷಯ ತಜ್ಞರನ್ನು ಆಹ್ವಾನಿಸಬೇಕು, ಮಂಡಳಿಯು ಇದುವರೆಗೆ ಆಗಿರುವ ಸಾಧನೆ, ಕುರಿತು ಕಿರು ಚಿತ್ರ ಪ್ರದರ್ಶನ ಮಾಡಬೇಕು, ಮುಂದೆ ಮಂಡಳಿಯಿಂದ ಅನುಷ್ಠಾನ ಮಾಡಲು ತೆಗೆದುಕೊಳ್ಳಬಹುದಾದ ಕಾರ್ಯಕ್ರಮಗಳು/ಕಾಮಗಾರಿಗಳ ಬಗ್ಗೆ ಚರ್ಚಿಸಬೇಕು ಎಂದು ತಿಳಿಸಿದರು.

ನಿರ್ಣಯ: ಸಭೆಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚಿಸಿ ಮಂಡಳಿಯು 25ನೇ ವರ್ಷದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ರಜತ ಮಹೋತ್ಸವ ಆಚರಣೆಗೆ ಸರ್ಕಾರದಿಂದ ಅನುಮೋದನೆ ಪಡೆಯಬೇಕು ಹಾಗೂ ಹೆಚ್ಚುವರಿ ಅನುದಾನ ರೂ.10 ಕೋಟಿ ಬಿಡುಗಡೆ ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ನಿರ್ಣಯಿಸಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ಇತರೆ ವಿಷಯಗಳು:**

**ವಿಷಯ: 1: ಅನುಷ್ಠಾನಾಧಿಕಾರಿಗಳಿಗೆ ಕಾಮಗಾರಿಗಳ ಅನುಷ್ಠಾನಕ್ಕೆ ಮುಂಗಡ ಅನುದಾನ ನೀಡುವ ಕುರಿತು.**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸರ್ಕಾರದ ಯೋಜನಾ ಇಲಾಖೆಯಿಂದ ದಿನಾಂಕ: 1-9-2017 ರಲ್ಲಿ ಆದೇಶವನ್ನು ನೀಡಿದ್ದು, ಸದರಿ ಆದೇಶದಲ್ಲಿ ಈ ಹಿಂದೆ ನಿರ್ಮಿತಿ ಕೇಂದ್ರ, ಕೆ.ಆರ್.ಐ.ಡಿ.ಎಲ್, ಮತ್ತು ಇನ್ನಿತರೆ ಏಜೆನ್ಸಿಗಳಿಗೆ ಶೇಕಡ 80% ರಷ್ಟು ಮುಂಗಡ ಹಣ ನೀಡುವ ಪದ್ಧತಿಯನ್ನು ಬದಲಾಯಿಸಿ, ಕೆ.ಆರ್.ಐ.ಡಿ.ಎಲ್/ನಿರ್ಮಿತಿ ಕೇಂದ್ರ ಅಥವಾ ಇನ್ನಿತರೆ ಅಧೀನ ಸಂಸ್ಥೆಗಳಿಗೆ ವಹಿಸಲ್ಪಟ್ಟ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಶೇಕಡ 40% ರಷ್ಟು ಹಣವನ್ನು ಮಾತ್ರ ಮುಂಗಡ ಹಣವನ್ನು ನೀಡುವುದು, ನೀಡುವ ಹಣಕ್ಕೆ ಕಾಮಗಾರಿಗಳು ಸಂಪೂರ್ಣ ಮುಗಿದಿದೆ ಎಂದು ಪ್ರಮಾಣೀಕರಿಸಿದ ನಂತರವೇ, ಉಳಿದ ಶೇಕಡ 40 ರಷ್ಟು ಹಣವನ್ನು ಬಿಡುಗಡೆ ಮಾಡುವುದು, ಕೊನೆಯ ಶೇಕಡಾ 20% ಹಣವನ್ನು 3ನೇ ವ್ಯಕ್ತಿಯಿಂದ ಕಾಮಗಾರಿಗಳ ಪರಿಶೀಲನಾ ವರದಿ ಬಂದ ನಂತರವೇ ಉಳಿದ ಹಣವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಸರ್ಕಾರದ ಆದೇಶದಂತೆ ಅನುಷ್ಠಾನ ಅಧಿಕಾರಿಗಳಿಗೆ ಕಾಮಗಾರಿಗಳ ಅನುಷ್ಠಾನಕ್ಕೆ ಮುಂಗಡ ಹಣ ನೀಡಬೇಕೆಂದು ತೀರ್ಮಾನಿಸಿತು.

**ವಿಷಯ:-2: ಮಂಡಳಿಯಲ್ಲಿ 2013ರಲ್ಲಿ ರದ್ದಾಗಿರುವ ಹುದ್ದೆಗಳನ್ನು ಪುನ: ಮಂಜೂರು ಮಾಡುವ** ಬಗ್ಗೆ:

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಈ ಹಿಂದೆ 2013ರಲ್ಲಿ ಮಂಡಳಿ ವತಿಯಿಂದ ಕೆಲವು ಹುದ್ದೆಗಳನ್ನು ರದ್ದು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ಆದೇಶದ ಸಂ: ದಿನಾಂಕ: ಯೋಇ 26 ಮಪ್ರಮಂ 2013, ದಿನಾಂಕ:31-8-2013ರಲ್ಲಿ ಮಂಡಳಿಯಲ್ಲಿ ಮಂಜೂರಾಗಿದ್ದ ಸಹಾಯಕ ಲೆಕ್ಕ ನಿಯಂತ್ರಕರು-1 ಹುದ್ದೆ ದ್ವಿತೀಯ ದರ್ಜೆ ಸಹಾಯಕರು,-1 ಹುದ್ದೆ, ಶೀಘ್ರಲಿಪಿಗಾರರು-2 ಹುದ್ದೆ, ಬೆರಳಚ್ಚುಗಾರರು-3 ಹುದ್ದೆ, ವಾಹನ ಚಾಲಕರು -1 ಹುದ್ದೆ ಒಟ್ಟು-8 ಹುದ್ದೆಗಳನ್ನು ರದ್ದುಪಡಿಸಲಾಗಿದೆ. ಈ ರೀತಿ ರದ್ದುಪಡಿಸಿರುವ ಹುದ್ದೆಗಳು ವಾಸ್ತವಿಕವಾಗಿ ಮಂಡಳಿಯಲ್ಲಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ರದ್ದಾಗಿರುವ 8 ಹುದ್ದೆಗಳನ್ನು ಪುನ: ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಸಭೆಯು ಸದರಿ ವಿಷಯದ ಬಗ್ಗೆ ಚರ್ಚಿಸಿ, ರದ್ದಾಗಿರುವ 8 ಹುದ್ದೆಗಳನ್ನು ಪುನ: ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

**ವಿಷಯ: 3: ಮಂಡಳಿಯ ಅಧಿಕಾರಿ ವಸತಿ ಗೃಹಗಳು ಖಾಲಿ ಇರುವುದನ್ನು ಬೇರೆ ಇಲಾಖೆಯ ಅಧಿಕಾರಿಗಳಿಗೆ ತಾತ್ಕಾಲಿಕವಾಗಿ ಬಾಡಿಗೆಗೆ ನೀಡುವ ಕುರಿತು.**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿಯ ಕಚೇರಿಯ ಆವರಣದಲ್ಲಿರುವ ಅಧಿಕಾರಿಗಳ ವಸತಿ ಗೃಹ ಭದ್ರಾ ಕೆಲವು ತಿಂಗಳುಗಳಿಂದ ಖಾಲಿ ಇರುತ್ತದೆ. ಖಾಲಿ ಇರುವ ವಸತಿ ಗೃಹವನ್ನು ಬಾಡಿಗೆಗೆ ನೀಡಬೇಕೆಂದು ಶಿವಮೊಗ್ಗ ನಗರಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿಗಳು ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಸಭೆಯು ನಿರ್ಣಯ ತೆಗೆದುಕೊಳ್ಳಬಹುದಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಬ್ಯಾಡಗಿ ಕ್ಷೇತ್ರದ ಶಾಸಕರಾದ ಶ್ರೀ.ಶಿವಣ್ಣ ರವರು ಮಾತನಾಡುತ್ತಾ, ಮಂಡಳಿಯ ವಸತಿಗೃಹಗಳು ಖಾಲಿ ಇರುವುದಕ್ಕಿಂತ ಬೇರೆ ಅಧಿಕಾರಿಗಳಿಗೆ ಬಾಡಿಗೆಗೆ ನೀಡುವುದು ಸೂಕ್ತ, ಇದರಿಂದ ಮಂಡಳಿಗೆ ಬಾಡಿಗೆ ಬರುತ್ತದೆ ಹಾಗೂ ವಸತಿ ಗೃಹಗಳು ಸುಸ್ಥಿತಿಯಲ್ಲಿಡಲು ನೆರವಾಗುತ್ತದೆ ಎಂದು ತಿಳಿಸಿ ವಸತಿಗೃಹವನ್ನು ಬಾಡಿಗೆಗೆ ನೀಡುವಾಗ ಮಂಡಳಿಯ ಅಧಿಕಾರಿಗಳು ವಸತಿಗೃಹಕ್ಕೆ ವಾಸ ಮಾಡಲು ಬಂದಂತಹ ಸನ್ನಿವೇಶದಲ್ಲಿ ಖಾಲಿ ಮಾಡಬೇಕೆಂದು ಷರತ್ತನ್ನು ಹಾಕಬೇಕೆಂದು ತಿಳಿಸಿದರು.

**ನಿರ್ಣಯ:** ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಮಂಡಳಿ ಅಧಿಕಾರಿಗಳ ವಸತಿ ಗೃಹ- " ಭದ್ರಾ " ವನ್ನು ತಾತ್ಕಲಿಕವಾಗಿ ಬಾಡಿಗೆಗೆ ಬೇರೆ ಇಲಾಖೆಯ ಸರ್ಕಾರಿ ಅಧಿಕಾರಿಗಳಿಗೆ ನೀಡಬಹುದೆಂದು ಮಂಡಳಿಯ ಅಧಿಕಾರಿಗಳು ಬಂದಾಗ ವಸತಿ ಗೃಹವನ್ನು ಖಾಲಿ ಮಾಡಬೇಕೆಂದು ಷರತ್ತನ್ನು ವಿಧಿಸಬೇಕೆಂದು ನಿರ್ಣಯಿಸಲಾಯಿತು.

**ವಿಷಯ: 4. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ 2018 ರ ದಿನಚರಿಯನ್ನು ಹೊಸದಾಗಿ ತರುವ ಬಗ್ಗೆ:**

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ 2018 ನೇ ಸಾಲಿನ ದಿನಚರಿಯನ್ನು ತರಬೇಕೆಂದು ನಾಮ ನಿರ್ದೇಶಿತ ಸದಸ್ಯರುಗಳಾದ, ಶ್ರೀ.ಮೊಹಮದ್ ಸನಾವುಲ್ಲಾ, ಶ್ರೀ.ಎಸ್.ಜೈಕುಮಾರ್, ಹಾಗೂ ಶ್ರೀಮತಿ.ಸಾವಿತ್ರಿ ಗಂಗಪ್ಪ ಇವರು ಕೋರಿದರು. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿ ವತಿಯಿಂದ 2018 ರ ದಿನಚರಿಯನ್ನು ತರುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುತ್ತದೆಂದು ತಿಳಿಸಿದರು.

ಚರ್ಚೆಸತಕ್ಕ ವಿಷಯಗಳು ಏನೂ ಇಲ್ಲದ ಪ್ರಯುಕ್ತ ಮಂಡಳಿಯ ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

5/12/2017

ಕಾರ್ಯದರ್ಶಿ(ಪ್ರ)
ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ,
ಶಿವಮೊಗ್ಗ

ಅಧ್ಯಕ್ಷರು,
ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ,
ಶಿವಮೊಗ್ಗ.

# ಅನುಬಂಧ

ದಿನಾಂಕ : 29-11-2017 ರಂದು ಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ ಹೆಚ್.ಪಿ ಮೋಹನ್ ರವರ ಅಧ್ಯಕ್ಷತೆಯಲ್ಲಿ ಮಂಡಳಿ ಕಛೇರಿಯ "ಮಲೆನಾಡು ಸಿರಿ" ಸಭಾಂಗಣದಲ್ಲಿ ಜರುಗಿದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಶಿವಮೊಗ್ಗದ 2017-18 ನೇ ಸಾಲಿನ ದ್ವಿತೀಯ ಸರ್ವ ಸದಸ್ಯರ ಸಾಮಾನ್ಯ ಸಭೆಗೆ ಹಾಜರಾದ ಸದಸ್ಯರುಗಳ ಪಟ್ಟಿ

| ಕ್ರಮ ಸಂಖ್ಯೆ | ಶ್ರೀಯುತರ ಹೆಸರುಗಳು |
|---|---|
| 1 | ಶ್ರೀ ಹೆಚ್.ಪಿ.ಮೋಹನ್, ಅಧ್ಯಕ್ಷರು, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ,ಶಿವಮೊಗ್ಗ |
| 2 | ಶ್ರೀ ಮನೋಹರ್ ಹೆಚ್.ತಹಶೀಲ್ದಾರ್, ಮಾನ್ಯ ಶಾಸಕರು, ಬ್ಯಾಡಗಿ ಕ್ಷೇತ್ರ |
| 3 | ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್, ಮಾನ್ಯ ಶಾಸಕರು, ಬ್ಯಾಡಗಿ ಕ್ಷೇತ್ರ, |
| 4 | ಶ್ರೀ ವಡ್ನಾಳ್ ರಾಜಣ್ಣ, ಮಾನ್ಯ ಶಾಸಕರು, ಚನ್ನಗಿರಿ ಕ್ಷೇತ್ರ |
| 5 | ಶ್ರೀ ಜೀವರಾಜ್, ಮಾನ್ಯ ಶಾಸಕರು, ಶೃಂಗೇರಿ ಕ್ಷೇತ್ರ |
| 6 | ಶ್ರೀ ಆರ್.ಪ್ರಸನ್ನಕುಮಾರ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಶಿವಮೊಗ್ಗ |
| 7 | ಶ್ರೀ ಆರ್.ಧರ್ಮಸೇನ್, ಮಾನ್ಯ ವಿಧಾನ ಪರಿಷತ್ ಸದಸ್ಯರು,ಸ್ಥಳೀಯ ಸಂಸ್ಥೆಗಳ ಕ್ಷೇತ್ರ,ಮೈಸೂರು |
| 8 | ಶ್ರೀಮತಿ ಚೈತ್ರಶ್ರೀ, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್,ಚಿಕ್ಕಮಗಳೂರು. |
| 9 | ಶ್ರೀಮತಿ ಜ್ಯೋತಿ ಎಸ್ ಕುಮಾರ್, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್,ಶಿವಮೊಗ್ಗ |
| 10 | ಶ್ರೀ.ದಿನಕರ್ ಬಾಬು, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್,ಉಡುಪಿ, |
| 11 | ಶ್ರೀಮತಿ ಬಿ.ಎಸ್. ಶ್ವೇತ ದೇವರಾಜ್, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್,ಹಾಸನ |
| 12 | ಶ್ರೀಮತಿ ಜಯಶ್ರೀ ಗುರುದಾಸ ಮೊಗೇರ, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್,ಉತ್ತರ ಕನ್ನಡ |
| 13 | ಶ್ರೀ ಎಸ್.ಡಿ.ನಾಯ್ಕ, ಮಾನ್ಯನಾಮ ನಿರ್ದೇಶಿತ ಸದಸ್ಯರು,ಸಿದ್ದಾಪುರ |
| 14 | ಶ್ರೀ ಬಿ.ಎಸ್. ಜಯ್‌ಕುಮಾರ್, ಮಾನ್ಯ ನಾಮ ನಿರ್ದೇಶಿತ ಸದಸ್ಯರು,ಸಕಲೇಶಪುರ, |
| 15 | ಶ್ರೀ ಅಂತೋನ್ ಸಿದ್ಧಿ ಡಿಗ್ಗೇಕರ್, ಮಾನ್ಯ ನಾಮ ನಿರ್ದೇಶಿತ ಸದಸ್ಯರು, ಹಳಿಯಾಳ |
| 16 | ಶ್ರೀಮತಿ ಸಾವಿತ್ರಿ ಗಂಗಪ್ಪ, ಮಾನ್ಯ ನಾಮ ನಿರ್ದೇಶಿತ ಸದಸ್ಯರು, ಕಡೂರು, |
| 17 | ಶ್ರೀ ಮೊಹಮದ್ ಸನಾವುಲ್ಲಾ, ಮಾನ್ಯ ನಾಮ ನಿರ್ದೇಶಿತ ಸದಸ್ಯರು,ಭದ್ರಾವತಿ |
| 18 | ಶ್ರೀ ಜಿ.ಎಸ್.ನಾರಾಯಣ್‌ರಾವ್, ಮಾನ್ಯ ನಾಮ ನಿರ್ದೇಶಿತ ಸದಸ್ಯರು,ತೀರ್ಥಹಳ್ಳಿ |
| 19 | ಶ್ರೀ ಎ.ಬಿ.ಮಾಚಯ್ಯ, ಮಾನ್ಯ ನಾಮ ನಿರ್ದೇಶಿತ ಸದಸ್ಯರು,ಬೆಂಗಳೂರು. |
| 20 | ಶ್ರೀ ಬಿ.ಆರ್.ಜಯಂತ್, ಮಾನ್ಯ ನಾಮ ನಿರ್ದೇಶಿತ ಸದಸ್ಯರು,ಸಾಗರ |
| 21 | ಶ್ರೀ ಸುಬ್ಬರಾವ್, ಕಾರ್ಯದರ್ಶಿ(ಪ್ರಭಾರ), ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ,ಶಿವಮೊಗ್ಗ |